ಅಖಿಲ ಕರ್ನಾಟಕ ಕುಡುಕ ಮಹಾ ಸಂಘದ ಘನ ಅಧ್ಯಕ್ಷರಾದ ಹೊಸರೋಡು ಪಾಂಡು ನಿಜಕ್ಕೂ ಬೇಸರಗೊಂಡಿದ್ದರು. ಅವರ ಮಾತಿಗೆ ಇತ್ತೀಚೆಗೆ ಪೊಲೀಸರು ಕವಡೆ ಕಿಮ್ಮತ್ತೂ ನೀಡುತ್ತಿರಲಿಲ್ಲ. ಮಾತ್ರವಲ್ಲ 'ಹಚಾ' ಅಂತ ಅವರನ್ನು ದೂರವಿಟ್ಟುಬಿಟ್ಟಿದ್ದರು. ಮೊದಲು ಹಾಗಿರಲಿಲ್ಲ. ಅಷ್ಟೋ ಇಷ್ಟೋ ಬೆಲೆಯಿತ್ತು. ಓ... ಬನ್ನೀ ಬನ್ನೀ ಪಾಂಡು ಅವರೇ, ಅಂತ ಗೌರವಯುತವಾಗಿ ಸಂಬೋಧಿಸುತ್ತಿದುದಲ್ಲದೆ ಅವರ ಮಾತಿಗೆ ಬೆಲೆ ಕೊಟ್ಟು ಎಷ್ಟೋ ಕುಡುಕರನ್ನು ಬರೀ ವಾರ್ನಿಂಗ್ ಮೇಲೆಯೇ ಮನೆಗೆ ಕಳಿಸುತ್ತಿದ್ದುಂಟು. ಕುಡಿದು ಕಿಕ್ಕು ಹತ್ತಿಸಿಕೊಂಡು ಫೈಟು ಮಾಡಿ ಅಂಗಿ ಬನೀನುಗಳನ್ನೆಲ್ಲಾ ಹರಿದುಕೊಂಡು ಬರುವ ಕುಡುಕರನ್ನು ಕರೆದು ಸಂತೈಸಿ ಯಾಕ್ರೆಪಾ... ಹಿಂಗ್ಯಾಕೆ ನಿಮ್ ಮರ್ವಾದೆ ನೀವೇ ತಕ್ಕಂತೀರಿ? ಬರ್ರಿ ಅದೇನು ಪರಿಹಾರ ಹುಡುಕಾನಂತೆ... ಅಂತ ಕೂಡಿಸಿಕೊಂಡು ಪಂಚಾಯ್ತಿ ಮುಖಾಂತರ ಅವರ ಸಮಸ್ಯೆಗಳನ್ನು ಬಗೆಹರಿಸಿಕೊಡುತ್ತಿದ್ದುದಲ್ಲದೆ ಠಾಣೆಯ ಮೆಟ್ಟಿಲು ಹತ್ತಬೇಕಿದ್ದ ಅವೆಷ್ಟೋ ಪ್ರಕರಣಗಳನ್ನು ತಮ್ಮ ಲೆವೆಲ್ಲಿನಲ್ಲೇ ಬಗೆಹರಿಸಿದ ಕೀರ್ತಿಗೆ ಭಾಜನರಾಗಿದ್ದರು ಶ್ರೀಮಾನ್ ಪಾಂಡು ಅವರು. ಅಂಥವರ ಮಾತಿಗೆ ಬೆಲೆ ಇಲ್ಲವೆಂದರೇನೆಂದು ನಮ್ಮ ಬಡಾವಣೆಯ ಕುಡುಕರೆಲ್ಲ ಮೊನ್ನೆ ನವಕರ್ನಾಟಕ ಬಾರ್‌ನಲ್ಲಿ ಮತ್ತೊಂದು ಸುತ್ತು ಪೇರಿಸುತ್ತ ಚಿಂತನ ಮಂಥನವನ್ನು ನಡೆಸಿ ತಮ್ಮ ವಿರೋಧವನ್ನು ಯಾವ ರೀತಿ ತೋರ್ಪಡಿಸಬೇಕೆಂದು ಕ್ರಿಯಾ ಯೋಜನೆ ರೂಪಿಸುತ್ತಿರುವಾಗ ಪಾಂಡುವೇ ಖುದ್ದು ಹಾಜರಾಗಿ ಅವರನ್ನೆಲ್ಲಾ ಸಮಾಧಾನಿಸಿ ಕರೆದೊಯ್ದರೆಂಬುದು ಇತ್ತೀಚೆಗೆ ಬಂದ ಮಾಹಿತಿ.

ಬುಡಿ ಸಾ... ಕಾಲ ಕೆಟ್ಟೋಗದೆ... ಅವೂ ಇವೂ ಮೆಸೀನುಗಳು ಬಂದು ಮನುಸಾ ಮನ್ಸರಾಗೆ ಇಸ್ವಾಸಾನೇ ಉಳಿದಿಲ್ಲ. ನಾವು ಹೇಳಾದಕ್ಕಿಂತ ಅವು ತೋರ್ಸೋ ಮೀಟರೇ ನಿಮಗೆ ಎಚ್ಚಾಗೋಗದೆ... ಏನೋ ಬಾಯಿ ಚಪುಲಕ್ಕೆ ದಿನಾ ತಗಂಡಂಗೆ ಒಂದೀಟು ತಗಂತೀವಿ. ನಾವೇನು ಗ್ಯಾಲನುಗಟ್ಟಲೆ ಏರಿಸ್ಕೊಂಡು ಮನೀಗೆ ಹೋಗ್ದೆ ಮೋರೀನೋ ಚರಂಡೀನೋ ಹುಡಿಕ್ಕತಾರಲ್ಲಾ ಆ ಪೈಕೀನಾ?

